# ವಿಂಡ್ಸರ್ ಕ್ಯಾಸಲ್





**ಕೋಟೆಯ ಮೇಲ್ಭಾಗದಲ್ಲಿ ರಾಜವಂಶದ ಖಾಸಗಿ ಕೋಣೆಗಳು, ರಾಜರುಗಳ ಅಧಿಕೃತ ಭೇಟಿಗೆಂದೇ ನಿರ್ಮಿಸಲ್ಪಟ್ಟಿರುವ ಕೋಣೆಗಳಿವೆ. ಕಾಲು ದಾರಿಯ ಸುತ್ತಲಿನ ಹಸಿರು ಹುಲ್ಲುಗಾವಲು, ಉದ್ಯಾನವನ ಸುಂದರವಾಗಿವೆ.**

ಚಿತ್ರ– ಬರಹ: **ಡಿ.ಜಿ.ಮಲ್ಲಿಕಾರ್ಜುನ**

‘ರಾಯಲ್ ಫ್ಯಾಮಿಲಿ’ ಎಂದೇ ಜಗತ್ತಿನಾದ್ಯಂತ ಕರೆಸಿಕೊಳ್ಳುವ ಇಂಗ್ಲೆಂಡ್ ರಾಜಮನೆತನ ಹೆಸರಿಗೆ ತಕ್ಕಂತೆ ವೈಭವೋಪೇತ ಜೀವನಕ್ಕೆ ಹೆಸರುವಾಸಿ. ಲಂಡನ್ನಿನ ರಾಜಕುಟುಂಬದ ಅರಮನೆಗಳು ಈ ಕುಟುಂಬದ ಶ್ರೀಮಂತಿಕೆಯನ್ನು ಸಾರುತ್ತವೆ. ಈ ಅರಮನೆಗಳಿಗೆ ರಾಯಲ್ ರೆಸಿಡೆನ್ಸ್ ಎಂದು ಕರೆಯುವುದು ರೂಢಿ.

ರಾಜಮನೆತನ ವಾಸವಿರುವ ಜಗತ್ತಿನ ಅತಿ ದೊಡ್ಡ ಕೋಟೆ ವಿಂಡ್ಸರ್ ಕ್ಯಾಸಲ್. ಈ ರಾಯಲ್ ರೆಸಿಡೆನ್ಸ್ 900 ವರ್ಷದಿಂದ ಇಂಗ್ಲೆಂಡ್ ರಾಜಮನೆತನದ ಸುಪರ್ದಿಯಲ್ಲಿದೆ. ಪ್ರತಿ ವರ್ಷದ ಮಾರ್ಚ್–ಏಪ್ರಿಲ್ ಸಮಯದಲ್ಲಿ ಒಂದು ತಿಂಗಳು ವಿಂಡ್ಸರ್ ಕ್ಯಾಸಲ್ ರಾಣಿಯ ಅಧಿಕೃತ ನಿವಾಸವಾಗಿ ಬದಲಾಗುತ್ತದೆ. ಇದೇ ಸಮಯದಲ್ಲಿ ಇಂಗ್ಲೆಂಡ್‌ನ ರಾಜಕೀಯ ಪ್ರಮುಖರು ಹಾಗೂ ವಿವಿಧ ಕ್ಷೇತ್ರಗಳ ಹೆಸರಾಂತ ವ್ಯಕ್ತಿಗಳಿಗೆ ಔತಣಕೂಟವನ್ನೂ ರಾಣಿ ಇಲ್ಲಿ ಆಯೋಜಿಸುತ್ತಾರೆ.

ಕೋಟೆಯ ಮೇಲ್ಭಾಗದಲ್ಲಿ ರಾಜವಂಶದ ಖಾಸಗಿ ಕೋಣೆಗಳು, ರಾಜರುಗಳ ಅಧಿಕೃತ ಭೇಟಿಗೆಂದೇ ನಿರ್ಮಿಸಲ್ಪಟ್ಟಿರುವ ಕೋಣೆಗಳಿವೆ. ಕಾಲು ದಾರಿಯ ಸುತ್ತಲಿನ ಹಸಿರು ಹುಲ್ಲುಗಾವಲು, ಉದ್ಯಾನವನ ಸುಂದರವಾಗಿವೆ. ಈ ಕೋಟೆ ವಿಶ್ರಾಂತಿ ತಾಣವಾದ್ದರಿಂದ ಹಲವಾರು ಕೋಣೆಗಳನ್ನು ವಸ್ತು ಸಂಗ್ರಹಾಲಯವಾಗಿ ಪರಿವರ್ತಿಸಲಾಗಿದೆ. ವಿವಿಧ ಕಾಲಮಾನಗಳಲ್ಲಿ ಗೆದ್ದ, ಇಲ್ಲವೇ ಕಾಣಿಕೆಯಾಗಿ ಪಡೆದ ಅಪರೂಪದ ವಸ್ತುಗಳನ್ನ ಪ್ರದರ್ಶನಕ್ಕಿಡಲಾಗಿದೆ. ಟಿಪ್ಪೂವಿನ ಕಿರೀಟ, ಖಡ್ಗ ಮತ್ತು ಯುದ್ಧವಸ್ತ್ರ. ಜೊತೆಗೆ ಟಿಪ್ಪೂವಿನ ಸಿಂಹಾಸನದಲ್ಲಿದ್ದ ಪೂರ್ಣವಾಗಿ ಬಂಗಾರದಲ್ಲಿ ನಿರ್ಮಿತ ಹುಲಿ ಇಲ್ಲಿವೆ. ವಜ್ರಖಚಿತ ಖಡ್ಗ, ವಿವಿಧ ರೀತಿಯ ಖಡ್ಗಗಳು, ವೈವಿಧ್ಯಮಯ ಬಂದೂಕುಗಳು, ವಿವಿಧ ವಿನ್ಯಾಸದ ಸಿಂಹಾಸನಗಳು, ಅಸ್ತ್ರಗಳನ್ನು ಪ್ರದರ್ಶಿಸಲಾಗಿದೆ.

ವಿಶ್ವದ ಅತ್ಯಂತ ಪುರಾತನ ಹಾಗೂ ವಿಶಾಲವಾದ ಕೋಟೆಯಾಗಿರುವ ವಿಂಡ್ಸರ್ ಕ್ಯಾಸಲ್ ಅತ್ಯಂತ ಸುಂದರ, ಸುವ್ಯವಸ್ಥಿತ ಮತ್ತು ಉತ್ತಮ ನಿರ್ವಹಣೆ ಹೊಂದಿರುವ ಆಕರ್ಷಕ ಪ್ರವಾಸಿ ತಾಣವಾಗಿದೆ.

ನಮ್ಮ ‘ಬೆಂಗಳೂರು ಅರಮನೆ’ ಯುರೋಪಿಯನ್ ಚಹರೆಯುಳ್ಳ ಬೆಂಗಳೂರಿನ ಕಟ್ಟಡಗಳಲ್ಲಿ ಪ್ರಮುಖವಾದುದು. ಸೆಂಟ್ರಲ್ ಹೈಸ್ಕೂಲ್‌ನ ಮೊದಲ ಪ್ರಿನ್ಸಿಪಾಲ್ ರೆವರೆಂಡ್ ಜೆ.ಗಾರೆಟ್ 1862ರಲ್ಲಿ ತಮ್ಮ ವಾಸಕ್ಕಾಗಿ ನಿರ್ಮಿಸಿದ ಕಟ್ಟಡವೇ ಬೆಂಗಳೂರು ಅರಮನೆ. ಲಂಡನ್‌ನ ವಿಂಡ್ಸರ್ ಕ್ಯಾಸಲ್ ಅನ್ನು ಹೋಲುವಂತೆ ಇದನ್ನು ಕಟ್ಟಲಾಗಿದೆ.